

ಶಿಕ್ಷಣ ಮುಖ್ಯವೋ, ಉದ್ಯೋಗ ಮುಖ್ಯವೋ? ಎಂಬುದು ಈ ಕಾಲಮಾನದ ವಿದ್ಯಾರ್ಥಿಗಳನ್ನು ಕಾಡುವ ದ್ವಂದ್ವ. ತಜ್ಞರ ಪ್ರಕಾರ ಶಿಕ್ಷಣ ಮತ್ತು ಉದ್ಯೋಗ ಎರಡೂ ಮುಖ್ಯ. ಆದರೂ ಇದು ವಿದ್ಯಾರ್ಥಿಯ ಗುರಿ, ಆಸಕ್ತಿ, ಕೌಶಲದ ಮೇಲೆ ಅವಲಂಬಿತವಾಗಿರುತ್ತದೆ. ಯಶಸ್ವಿ ವೃತ್ತಿಜೀವನಕ್ಕೆ ಶಿಕ್ಷಣ ಅಡಿಪಾಯವಾಗಿದ್ದರೆ, ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಉದ್ಯೋಗದ ಅನುಭವ ಮತ್ತು ಕೌಶಲ ಅವಶ್ಯಕ. ಶಿಕ್ಷಣ ಮತ್ತು ಉದ್ಯೋಗದ ಸುತ್ತ ಗಿರಕಿ ಹೊಡೆಯುವ ಈ ಬರಹ ಯುವಸಮುದಾಯದ ಗೊಂದಲವನ್ನು ದೂರವಿಡುವ ಪ್ರಯತ್ನ ಮಾಡಿದೆ.

■ ಗುರು ಪಿ.ಎಸ್.

ಈ ಬಗ್ಗೆಯೇ ಯೋಚನೆ ಮಾಡಲಾರಂಭಿಸಿದಾಗ ನನ್ನ ಮನದಲ್ಲಿ ಮೂಡಿದ ಪ್ರಶ್ನೆ, ಶಿಕ್ಷಣ ಮುಖ್ಯವೋ, ಉದ್ಯೋಗ ಮುಖ್ಯವೋ?

ಈ ವಿಚಾರ ಹೆಚ್ಚು ಕಾಡುವುದು ಕಾಲೇಜು ಹಂತ ತಲುಪಿದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರಲ್ಲಿ. ಈ ಮೊದಲು, 'ಹೆಚ್ಚು ಓದು, ಒಂದೊಳ್ಳೆಯ ಕೆಲಸ ಸಿಗುತ್ತದೆ' ಎಂಬ ನಂಬಿಕೆ ಇತ್ತು. ಆದರೆ, ಇಂದಿನ ಪರಿಸ್ಥಿತಿ ಹಾಗಿಲ್ಲ. ಉನ್ನತ ಶಿಕ್ಷಣ ಪಡೆದರೂ ಕೆಲಸ ಸಿಗುತ್ತದೆಯೇ ಎಂಬ ಗೊಂದಲ ಒಂದೆಡೆಯಾದರೆ, ಹೆಚ್ಚು ಓದುವುದು ಬಿಟ್ಟು ಕೆಲಸಕ್ಕೆ ಹೋದರೆ ಮುಂದಿನ ಭವಿಷ್ಯ ಹೇಗಿರಬಹುದು ಎಂಬ ಅನುಮಾನ ಇಂದಿನ ಯುವಸಮೂಹವನ್ನು ದ್ವಂದ್ವದಲ್ಲಿಟ್ಟಿದೆ.

